O.S.245/18 P.W. 1 Dated :12-09-2022.

ಮಧ್ಯಾಹ್ನ 4-00 ಗಂಟೆಗೆ ಸಾಕ್ಷಿಯನ್ನು ಪುನಃ ಕರೆಸಿ ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

ಮುಂದುವರಿದ ಪಾಟೀಸವಾಲು: ಶ್ರೀ.ಕೆ.ಎನ್. ವಕೀಲರಿಂದಃ

ದಾವಾ ಸ್ವತ್ತಿನಲ್ಲಿ 700 ಹೆಬ್ಬೇವು ಮರಗಳು , 500 ತೇಗದ ಮರಗಳು , 500 ಸಿಲ್ವರ್ ಮರ , 100 ಮಾವಿನ ಮರ , 100 ಸಪೋಟ ಮರಗಳು , 200 ಗೋಡಂಬಿ ಸಸಿಗಳನ್ನು ಹಾಕಿರುತ್ತೇನೆಂದು ನನ್ನ ತಕರಾರಿನಲ್ಲಿ ಹೇಳಿದ್ದು, ಅವುಗಳ ವಿವರವನ್ನು ಪಹಣಿಯಲ್ಲಿ ನಮೂದಿಸಿರುವುದಿಲ್ಲ. ಅರಣ್ಯಾಧಿಕಾರಿಗಳಿಂದ ಸ್ಥಳಮಹಜರು ಮಾಡಿಸಿ ,ಮರಗಳ ಬಗ್ಗೆ ಅಂಕಿಅಂಶಗಳನ್ನು 1992-93 ನೇ ಸಾಲಿನಲ್ಲಿ ಪಡೆದುಕೊಂಡಿರುತ್ತೇನೆ. ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ಹಾಜರುಪಡಿಸಿರುವ ಪಹಣಿಗಳಲ್ಲಿ ಕಲಂ-7 ರಲ್ಲಿ ಮರಗಳು ಇರುವ ಬಗ್ಗೆ ನಮೂದಿರುವುದಿಲ್ಲ ಎಂದರೆ ಸರಿ . ಪಹಣಿಗಳಲ್ಲಿ ಮರಗಳ ಸಂಖ್ಯೆಗಳನ್ನು ನಮೂದು ಮಾಡಿಸಲು ನನಗೆ ಯಾವುದೇ ತೊಂದರೆ ಇರಲಿಲ್ಲ. ನಾನು ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಸರ್ಕಾರದಿಂದ ಅನುದಾನ ಪಡೆದಿರುವ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಮೀನುಗಾರಿಕೆಗೆ ಮತ್ತು ಕೃಷಿಹೊಂಡಾಕ್ಕೆ ಸಂಬಂಧಿಸಿದಂತೆ ಅನುದಾನವನ್ನು ಪಡೆದುಕೊಂಡಿರುತ್ತೇನೆ. ದಾವೆಗೋಸ್ಕರ ಸರ್ಕಾರದಿಂದ ಅನುದಾನ ಪಡೆದುಕೊಂಡಿದ್ದೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ತೋಟಗಾರಿಕೆ ಇಲಾಖೆಯಿಂದ ನಾನು ಯಾವುದೇ ಅನುದಾನವನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಫಾರಮ್ ಹೌಸ್ ನಿರ್ಮಿಸಲು ಕುಂದೂರು ಪಂಚಾಯಿತಿಯಿಂದ ಲೈಸೆನ್ಸ್ ಪಡೆದುಕೊಂಡಿರುತ್ತೇನೆ, ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಬಿದಿರು ಮತ್ತು ಇದ್ದಿಲನ್ನು ಶೇಖರಿಸಿದ್ದೆನು ಎಂದು ಅರಣ್ಯ ಇಲಾಖೆಯವರು ನನ್ನ ವಿರುದ್ಧ ಕಾನೂನು ಕ್ರಮ ಕೈಗೊಂಡು ದಂಡ ವಿಧಿಸಿದ್ದರು ಎಂದರೆ

ಸರಿಯಲ್ಲ. ನಾನು ಗರಿಘಟ್ಟ ಗ್ರಾಮದ ತಿಮ್ಮೇಗೌಡ ಬಿನ್ ಮೂಡ್ಲೇಗೌಡರ ವಂಶಸ್ಥ ಎಂದರೆ ಸರಿಯಲ್ಲ. ಮಂಜುನಾಥ ರವರು ತಿಪ್ಪನಹಳ್ಳಿ ಗ್ರಾಮದ ಪುಟ್ಟೇಗೌಡ ಬಿನ್ ರಂಗೇಗೌಡರ ವಂಶಸ್ಥರು ಎಂದರೆ ಪಟೇಲ್ ಪುಟ್ಟೇಗೌಡ ಬಿನ್ ಪಟೇಲ್ ರಂಗೇಗೌಡರ ವಂಶಸ್ಥರು ಎಂದು ನುಡಿಯುತ್ತಾರೆ. ಮೇಲೆ ಹೇಳಿರುವ ವಂಶಸ್ಥರ ಬಗ್ಗೆ ಅ.ದಾ. 93/2011 ರಲ್ಲಿ ಮಂಜುನಾಥರವರ ಪರವಾಗಿ ಡಿಕ್ರಿ ಆದೇಶ ವಾಗಿರುತ್ತದೆ ಎಂದರೆ ಸರಿಯಲ್ಲ. ನಾನು ಬೇರೆ ಬೇರೆ ದಾವಾಗಳಲ್ಲಿ ಬೇರೆ ಬೇರೆ ವಂಶವೃಕ್ಷಗಳನ್ನು ಹಾಜರುಪಡಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ನಾನು ರೆವಿನ್ಯೂ ಇಲಾಖೆಗಳಲ್ಲಿ ಬೇರೆ ಬೇರೆ ವಂಶವೃಕ್ಷಗಳ ಪ್ರಮಾಣ ಪತ್ರಗಳನ್ನು ನೀಡಿ ದಾಖಲೆಗಳನ್ನು ಪಡೆದುಕೊಂಡಿರುವುದಕ್ಕೆ ವಾದಿ ಯ ಜಿ ಪಿ ಎ ಹೋಲ್ಡರ್ ನನ್ನ ವಿರುದ್ಧ ಕ್ರಿಮಿನಲ್ ಪ್ರಕರಣವನ್ನು ದಾಖಲಿಸಿರುತ್ತಾರೆ ಎಂದರೆ ಸಾಕ್ಷಿಯು ಸುಳ್ಳು ಪ್ರಕರಣ ದಾಖಲಿಸಿರುತ್ತಾರೆ ಎಂದು ನುಡಿಯುತ್ತಾರೆ.

ಮುಂದುವರಿದ ಪಾಟೀಸವಾಲಿಗಾಗಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ .

ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಆಲೂರು.